REVIEW OF LITERATURE

ISSN: 2347-2723
IMPACT FACTOR : 2.0260(UIF)
VOLUME - 4 | ISSUE - 6 | JANUARY – 2017

# ಎ.ಕೆ. ರಾಮೇಶ್ವರರ ದೃಷ್ಟಿಯಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರ ವ್ಯಕ್ತಿತ್ವ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ಗುಲಬರ್ಗಾ.



ಎ.ಕೆ. ರಾಮೇಶ್ವರ ಅವರು ತಮ್ಮ ಕಾವ್ಯದ ಮೂಲಕ ಮಕ್ಕಳಿಗೆ ಸಮಾಜ ಸುಧಾರಕರಾದ ಬುದ್ಧ, ಬಸವ, ಅಂಬೇಡ್ಕರರ ಬಗ್ಗೆ ವಿನೂತನವಾಗಿ ರಚಿಸಿದ್ದಾರೆ. ಇವರು ಕಾವ್ಯಗಳಲ್ಲಿ ಬುದ್ಧನು ಬದುಕಿನ ನಿಜದ ಬಗ್ಗೆ ತಿಳಿಸಿರುವುದು, ಬಸವಣ್ಣನವರು ಭಕ್ತಿಪರ ಚಿಂತನೆಗಳನ್ನು ವ್ಯಕ್ತಪಡಿಸಿರುವುದು, ಅಂಬೇಡ್ಕರರು ಸಮಾನತೆಯ ಕುರಿತು ವಿಚಾರಗಳನ್ನು ಕವಿಯು ಮಕ್ಕಳ ಹಾಗೂ ಓದುಗರ ಮನಮುಟ್ಟುವಂತೆ ರಚಿಸಿದ್ದಾರೆ. ಈ ಮೇಲೆ ತಿಳಿಸಿದಂತೆ ಮೂವರು ಮಹಾನ್ ವಿಚಾರವಾದಿಗಳು, ಸೈದ್ಧಾಂತಿಕ ನೆಲೆಯಲ್ಲಿ ಚಿಂತನೆಗಳನ್ನು ಮಾಡುವುದನ್ನು ಕವಿಯು ತಮ್ಮ ಕಾವ್ಯಗಳಲ್ಲಿ ವಿಶಿಷ್ಟತೆಯಿಂದ ರಚಿಸಿದ್ದಾರೆ.

**ಗೌತಮ ಬುದ್ಧ**
**“ಕರುಳ ಕುಡಿಯ ಕಳೆದುಕೊಂಡು**
**ದುಃಖ ಭರಿತ ಕಿಸಾ ಗೌತುಮಿ**
**ಬುದ್ಧ ಬರುವ ದಾರಿಯಲ್ಲಿ**
**ಸತ್ತ ಮಗನ ಹಾಕಿ ಮಾನಿನಿ**
..............................................
..............................................
**ಕೇಳು ನೀನು ಕಾಳು ಸಾಸವೆ”**[1]

ಕಿಸಾ ಗೌತುಮಿ ತನ್ನ ಕರುಳಿನ ಕುಡಿಯಾದ ಮಗನನ್ನು ಕಳೆದುಕೊಂಡು ದುಃಖದಲ್ಲಿದ್ದವಳು. ಇವಳು ಬುದ್ಧನು ಬರುವ ದಾರಿಯಲ್ಲಿ ಕಾಯುತ್ತಾ ತನ್ನ ಸತ್ತ ಮಗನನ್ನು ಹಾಕಿಕೊಂಡು ಕುಳಿತಿದ್ದಳು. ಬುದ್ಧ ದೇವ ನೀನು ದಯಾನಿಧಿವಂತನು ಸತ್ತ ಮಗನಿಗೆ ಉಳಿಸು, ನಿನ್ನ ಮಗಳ ಬಾಳು ಬತ್ತಿಹೋಗುತ್ತಿದೆ ಎಂದು ದುಃಖದಿಂದ ಹೇಳಿದ್ದಳು. ಬುದ್ಧನು ಏಳು ತಾಯಿ ನೋವು ಸಹಿಸಿಕೊ ತಾಯಿ ಸಾವು ಇರದ ಮನೆಗೆ ಹೋಗಿ ಸಾಸವೆಯನ್ನು ಕೇಳು ಎಂದು ಬುದ್ಧನು ಆ ತಾಯಿಯ ನೋವನ್ನು ಕಡಿಮೆಮಾಡಿದನು. ಬುದ್ಧನಿಂದ ತಾಯಿಗೆ ದುಃಖ ತಾಳುವ ಶಕ್ತಿ ದೊರಕಿತು ಎನ್ನಬಹುದು.

**“ಓಣಿ ಕೇರಿ ಸುತ್ತಿ ತಿರುಗಿ**
**ಕೇಳಿ ಅರಿತು ಕಿಸಾಗೌತುಮಿ**
**ಸಾವು ಇರದ ಮನೆಯೇ ಇಲ್ಲ**
**ಸಾವು ಸಹಜ ಅರಿತ ಪೂರ್ಣಿಮೆ**
..............................................

..............................................
**ಎಂಬ ಮಾತು ಬಲ್ಲರೆಲ್ಲರು"[2]**

ತಾಯಿ ಗೌತುಮಿ ಬುದ್ಧನು ಸಾವು ಇರದ ಮನೆಗೆ ಹೋಗಿ ಸಾಸಿವೆ ತರುವುದಾಗಿ ಹೇಳಿದ್ದಳು ಕೇರಿ–ಕೇರಿ ಸುತ್ತಿ ತಿರುಗಿ ಕೇಳಿದರು ಸಿಗಲಿಲ್ಲ. ಬುದ್ಧನ ಈ ಮಾತು ತಾಯಿಗೆ ಸತ್ಯದ ಅರಿವುಂಟಾಯಿತ್ತು. ಸಾವು ಸಹಜ ಎಂಬ ಸತ್ಯವನ್ನು ಅರಿತಳೂ. ಬುದ್ಧನ ಕಾಲಿಗೆ ಬಿದ್ದು ಮತ್ತೆ ದುಃಖ ಭರಿತಳಾಗಿ ನೋವಿನಿಂದ ಬೆಂದಳು ಸಾವು ಇರದ ಮನೆಯೇ ಸಿಗಲಿಲ್ಲವೆಂದು ನಾನು ಸೋತೆನೆಂದಳು. ಈ ವಿಚಾರವನ್ನು ತಾಯಿಗೆ ತಿಳಿಸಿದ ನಂತರ ಬುದ್ಧನು ಹೌದು ತಾಯಿ ಹುಟ್ಟು ಸಾವು ಯಾರು ಗೆಲ್ಲರೂ. ಹುಟ್ಟಿದವರು ಒಂದಲ್ಲ ಒಂದು ದಿನ ಸಾಯಲೇಬೇಕು ಎಂಬ ಮಾತು ಎಲ್ಲರಿಗೆ ತಿಳಿಸಿದರು. ಈ ಕಾವ್ಯದ ಮೂಲಕ ಕವಿಯು ಹುಟ್ಟು–ಸಾವು ಎರಡು ಇರುವುದು ಜೀವನದಲ್ಲಿ ಆದರೆ ಇವೆರಡರ ನಡುವಿನ ಜೀವನ ರೂಪಿಸಿಕೊಳ್ಳುವುದು ನಮಗೆ ಸೇರಿದ್ದು ಎಂದು ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ ಎನ್ನಬಹುದು.

**ಬಸವ :**

**"ಬಸವ ನೀನು ಧರೆಗೆ ಬರಲು**
**ಮಂಗ ಮನುಜನಾದನು**
**ಭಕ್ತಿ ರಸವ ತುಂಬಿಕೊಂಡು**
**ಅವನೇ ದೇವನಾದನು**
..............................................
..............................................
**ಭುವಿಗೆ ಬೆಳಕು ತಂದರು"[3]**

ಬಸವಣ್ಣನವರು ಭೂಮಿಗೆ ಬರಲು ಮಂಗನಂತಿದ್ದವನು ಮನುಷ್ಯನಾದನು. ಭಕ್ತಿ ರಸವನು ತನ್ನ ತನುಮನದಲ್ಲಿ ತುಂಬಿಕೊಂಡು ಅವನು ದೇವನಾದನು. ಈ ಜಗತ್ತಿನಲ್ಲಿರುವಂತ ಜೀವರಾಶಿಗಳಿಗೆ ಒಳ್ಳೆಯದನು ಬಯಸಿರುವವನು. ಮನುಜ ಕುಲ ಒಂದೇ ಎಂದು ಭೇದ ಭಾವವನ್ನು ಅಳಿಸಿದವನು. ಇವನು ಯಾರು? ಯಾರು? ಎಂದು ನೀನು ಎಣಿಸದೇ ಎಲ್ಲರು ನಮ್ಮವರು ಎಂದು ಅವರೆಲ್ಲರಿಗೂ ಭಕ್ತಿಯ ರಸವನ್ನುಣಿಸಿದೆ. ವಚನಗಳ ಮೂಲಕ ನಡೆ–ನುಡಿಯ ಬಗ್ಗೆ ಕಲಿಸಿದೆ. ಹಗಲು–ಇರುಳು ಎನ್ನದೆ ದುಡಿದು ಪಡೆವ ದಿವ್ಯಮಂತ್ರ ತಿಳಿಸಿಕೊಟ್ಟಿದೆ. ನೀನು ಧರೆಗೆ ಬರಲು ಶರಣರೆಲ್ಲರೂ ಬಂದರು. ಕುಲವು–ಚಲವು ಹೊಡೆದೊಡಿಸಿ ಭೂಮಿಗೆ ಜ್ಞಾನಜ್ಯೋತಿಯ ಬೆಳಕು ತಂದಿರುವೆನು.

ಬಸವಣ್ಣನು ಲೋಕದಲ್ಲಿನ ಮೊದಲು ಮಂಗನಂತೆ ಇರುವ ಮನುಷ್ಯರನ್ನು ಮಾನವರನ್ನಾಗಿ ಪರಿವರ್ತಿಸಿದರು. ಅಷ್ಟೇ ಅಲ್ಲದೇ ಅವರಲ್ಲಿ ಭಕ್ತಿಯ ಭಾವನೆಯನ್ನು ಹುಟ್ಟಿಸಿ ನಾವೆಲ್ಲರೂ ಒಂದೆ ಎಂಬ ಭಾವನೆಯನ್ನು ಬೆಳೆಸಿದರು. ಇವರ ವಚನಗಳಲ್ಲಿ ನಡೆ–ನುಡಿ ಒಂದೆ ಇರಬೇಕು, ಹಲಗು ರಾತ್ರಿ ಎನ್ನದೆ ದುಡಿದು ಸಾಧನೆಯನ್ನು ಮಾಡಬೇಕು. ಇವರು ಜಗತ್ತಿನಲ್ಲಿ ಶರಣರ ಮಹತ್ವವನ್ನು ತಿಳಿಸಿಕೊಟ್ಟಿರುವರು.

**ಅಂಬೇಡ್ಕರ್ :**

**"ದಲಿತ ಕುಲದಿ ಹುಟ್ಟಿ ಭೀಮರಾವ್**
**ದಿಟ್ಟ ಹೆಜ್ಜೆ ಇಟ್ಟನು**
**ಕಷ್ಟಪಟ್ಟು ಓದಿ ಮುಂದೆ ಬರುವ**
**ಗಟ್ಟಿ ಪಣವ ತೊಟ್ಟನು**
..............................................
..............................................
**ಮಾಡಲಿಲ್ಲ ಕಾಳಜಿ"[4]**

ದಲಿತ ಕುಟುಂಬದಲ್ಲಿ ಜನಿಸಿದ ಭೀಮರಾವ್ ದಿಟ್ಟ ಹೆಜ್ಜೆ ಇಟ್ಟನು. ಕಷ್ಟಪಟ್ಟು ಓದಿ ಮುಂದೆ ಬರಬೇಕು ಎಂಬ ಪಣವನ್ನು ತೊಟ್ಟನು. ಮುಟ್ಟಿ ತಟ್ಟಿ ಎಂಬುದಕ್ಕೆ ತಾನೆ ಯುಕ್ತಿಯಿಂದ ಶಕ್ತಿಯಾದನು. ಇವನ ಹುಟ್ಟು ಊರು ಅಂಬೇವಾಡಿ ತಂದೆ ರಾಮಜಿ, ಇತನು ಕೊಳಚೆ ಪ್ರದೇಶದಲ್ಲಿ ವಾಸವಾಗಿರುತ್ತಿದ್ದವನು. ಇವನಿಗೆ ಯಾರು ಕಾಳಜಿ ವಹಿಸಲಿಲ್ಲ. ಈ ಕಾವ್ಯದಲ್ಲಿ ಕವಿಯು ಅಂಬೇಡ್ಕರ್ ಛಲವನ್ನು ತಿಳಿಸುವುದರಲ್ಲಿ ಬಡತನದಲ್ಲಿ ಬೆಂದ ಸ್ಥಿತಿಯನ್ನು ಹೇಳಿರುವುದು ತಿಳಿದು ಬರುತ್ತದೆ.

ಅಂಬೇಡ್ಕರರು ಒಂದು ದಲಿತ ಕುಟುಂಬದಲ್ಲಿ ಜನಿಸಿದರು. ಅವರು ತಮ್ಮ ಛಲದಿಂದ ಓದಿ ಸಾಧನೆ ಮಾಡಿದರು. ಅಲ್ಲದೇ ಸ್ವಾಭಿಮಾನದಿಂದ ಬಾಳಿ ಬದುಕಿದವರು. ಕೆಟ್ಟ ಸಂಪ್ರದಾಯಗಳನ್ನು ನಾಶ ಮಾಡಿ ಶ್ರೇಷ್ಠ ವ್ಯಕ್ತಿಯಾದರು. ತಾವು ಹುಟ್ಟಿರುವುದು ಬಡ ಕುಟುಂಬವೆಂದು ಹೇಳಿಕೊಂಡರು. ಅಂಬೇಡ್ಕರರ ಛಲದಿಂದ ಅನೇಕ ಸಾಧನೆಗಳನ್ನು ಮಾಡಿದ ಮಹಾನ್ ವ್ಯಕ್ತಿಯಾಗಿದ್ದಾರೆ.

**"ಸಮತೆ ಮಮತೆ ಹೇಳಿಕೊಟ್ಟ**
**ಮೊದಲ ಗುರುವು ಮಾತೆಯು**
**ಸತ್ಯ, ಶಾಂತಿ ಹಾಲಿನಲಿ ಬೆರೆಸಿ**
**ಕೊಟ್ಟ ಪುಣ್ಯ ದಾತೆಯು**
...............................................
...............................................
**ತಿಳಿದುಕೊಂಡ ಬುದ್ಧನು"**[5]

ಪ್ರೀತಿ, ಮಮತೆ ಹೇಳಿ ಕೊಟ್ಟ ಮೊದಲ ಗುರು ತಾಯಿಯಾಗಿದ್ದಾಳೆ. ಸತ್ಯ, ಶಾಂತಿ ಎಂಬುವುದನ್ನು ಹಾಲಿನಲ್ಲಿ ಬೆರೆಸಿಕೊಟ್ಟ ಪುಣ್ಯವಂತಳು ತಾಯಿ ಎಂದರು. ಅಂಬೇವಾಡಿಯಿಂದ ಅಮೇರಿಕಾದ ವಿದ್ಯೆಯ ನಗರಕ್ಕೆ ಹೋಗಿರುವ ಅಂಬೇಡ್ಕರರು ಅಲ್ಲಿ ಸಿಗುವಂತಹ ಎಲ್ಲ ಬಗೆಯ ಕೃತಿಗಳನ್ನು ಓದಿ ಸಂತೋಷ ಅನುಭವಿಸಿದರು. ಭೀಮಕಾಯ ಭೀಮರಾವನಾಗಿ ಬೆಳಕು ಕಂಡ ಸೂರ್ಯನಾಗಿ ತನ್ನ ಮನಕ್ಕೆ, ತನ್ನ ಜನಕ್ಕೆ ಸ್ಪೂರ್ತಿಯನ್ನು ಕೊಟ್ಟನು. ಅಂಬೇಡ್ಕರರು ಸಂವಿಧಾನ ಶಿಲ್ಪಿಯಾಗಿ ಮನುಕುಲಕ ಮಾನ್ಯ ಮಿತ್ರನಾದನು. ಧರಣಿಯಲ್ಲಿ ಬೆಳೆದ ಕುಲದ ಕೊಂಬನ್ನು ಮುರಿದ ದೇವ ಪುತ್ರನು ಎಂಬ ಹೊಗಳಿಕೆಗೆ ಪಾತ್ರನಾದನು. ಮನುಜರೆಲ್ಲ ಒಂದೆ ಎಂದು ಧ್ವನಿಯನೆತ್ತಿದ ಸಿದ್ಧನು. ಎಲ್ಲವೂ ಶೂನ್ಯವೆಂದು ತನ್ನ ತಾನು ತಿಳಿದುಕೊಂಡು ಬುದ್ಧನು. ಈ ರೀತಿಯಲ್ಲಿ ಅಂಬೇಡ್ಕರರು ತಾಯಿಯ ಪ್ರೀತಿ, ಮಮತೆ ಅಷ್ಟೇ ಅಲ್ಲದೆ ಸತ್ಯ, ಶಾಂತಿಯ ಬಗ್ಗೆ ಅರಿತವನಾಗಿದ್ದನು. ಇವರು ಅಮೇರಿಕಾದಂತಹ ದೊಡ್ಡ ದೇಶಕ್ಕೆ ಹೋಗಿ ವಿದ್ಯೆ ಸಂಪತ್ತನ್ನು ಪಡೆದನು. ಸಂವಿಧಾನ ಶಿಲ್ಪಿ ಎಂದು ದೊಡ್ಡ ಹೆಸರಾಯಿತು. ಅಷ್ಟೇ ಅಲ್ಲದೇ ದೇವ ಪುತ್ರನೆಂದು ಹೊಗಳಿಕಗೆ ಪಾತ್ರನಾದನು.

## ನಿಲುವುಗಳು :

ಈ ಮೇಲಿನ ಎಲ್ಲ ಕಾವ್ಯಗಳಲ್ಲಿ ಕವಿಯು ದೇಶದ ಮಹಾನ್ ವ್ಯಕ್ತಿಗಳಾದ ಬುದ್ಧ, ಬಸವ, ಅಂಬೇಡ್ಕರರ ಬಗ್ಗೆ ವಿಶಿಷ್ಟತೆಯಿಂದ ರಚಿಸಿದ್ದಾರೆ. ಇವರ ಕಾವ್ಯಗಳ ಮೂಲಕ ಅವರ ಆಚಾರ-ವಿಚಾರ, ನಡೆ-ನುಡಿ, ಸೈದ್ಧಾಂತಿಕ ನೆಲೆಯಲ್ಲಿ ವಿಚಾರಗಳು ಹೀಗೆ ಅನೇಕ ರೀತಿಯಲ್ಲಿ ಬುದ್ಧ, ಬಸವ, ಅಂಬೇಡ್ಕರರ ವೈಚಾರಿಕ ಚಿಂತನೆಗಳನ್ನು ಕೂಡ ಕವಿಯು ಸೂಕ್ಷ್ಮವಾಗಿ ರಚಿಸಿದ್ದಾರೆ. ಹೀಗೆ ಈ ಮಹಾನ್ ಸಮಾಜ ಸುಧಾರಕರ ಬಗ್ಗೆ ಮಕ್ಕಳ ಮನಮುಟ್ಟುವಂತೆ ಕಾವ್ಯಗಳನ್ನು ಸರಳ ಭಾಷೆ, ವಿಶಿಷ್ಟ ಶೈಲಿಯಲ್ಲಿ ರಚಿಸಿದ್ದಾರೆ.

## ಅಡಿಟಿಪ್ಪಣಿಗಳು

1. **ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ .ಪು 129. ಸಾಗರ ಪ್ರಕಾಶನ ಬೆಂಗಳೂರು.**
2. **ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ .ಪು 130. ಸಾಗರ ಪ್ರಕಾಶನ ಬೆಂಗಳೂರು.**
3. **ರಾಮೇಶ್ವರ ಎ.ಕೆ. : ಹಕ್ಕಿ ಹಾರುತಿವೆ. ಪು.37. ಕವಿರಾಜ ಮಾರ್ಗ ಪ್ರಕಾಶನ ಗುಲಬರ್ಗಾ.**
4. **ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ .ಪು 194. ಸಾಗರ ಪ್ರಕಾಶನ ಬೆಂಗಳೂರು.**
5. **ರಾಮೇಶ್ವರ ಎ.ಕೆ. : ಸಮಗ್ರ ಮಕ್ಕಳ ಕಾವ್ಯ .ಪು 195. ಸಾಗರ ಪ್ರಕಾಶನ ಬೆಂಗಳೂರು.**